**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/ಎನ್‌ಬಿಎ/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ,
ಬೆಂಗಳೂರು-560001
ದಿನಾಂಕ:01.01.2016

**ಸುತ್ತೋಲೆ**

ವಿಷಯ: ವಿವಿಧ ವಲಯದ ಪರೀಕ್ಷಾ ಪತ್ರಿಕೆಗಳ ಮೌಲ್ಯಮಾಪನ ಕೇಂದ್ರದಲ್ಲಿ ಎನ್.ಬಿ.ಎ ಕಾರ್ಯಗಾರ ಹಮ್ಮಿಕೊಳ್ಳುವ ಬಗ್ಗೆ.

ಉಲ್ಲೇಖ: ಸುತ್ತೋಲೆ ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/2014-15 ದಿ: 16.11.2015

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಪ್ಲೋಮಾ ಪ್ರೋಗ್ರಾಂಗಳಿಗೆ ಎನ್.ಬಿ.ಎ ವತಿಯಿಂದ ಮಾನ್ಯತೆ ಪಡೆಯಲು ಸಹಾಯವಾಗುವಂತೆ ಉಲ್ಲೇಖದನುಸಾರ ಈಗಾಗಲೇ ಸಚಿತ್ರ ವಿವರಣೆಯುಳ್ಳ ಸ್ವಯಂ ಮೌಲ್ಯಮಾಪನ ವರದಿ (Self Assessment Report) ಯನ್ನು ಇಲಾಖೆಯ ಅಂತರ್‌ಜಾಲತಾಣದಲ್ಲಿ ಪ್ರಕಟಿಸಿದ್ದು, ಈ ನಿಟ್ಟಿನಲ್ಲಿ ಎಲ್ಲಾ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಹಾಗೂ ಉಪನ್ಯಾಸಕರಿಗೆ ಸ್ವಯಂ ಮೌಲ್ಯಮಾಪನ ವರದಿ (Self Assessment Report)ಯನ್ನು ಭರ್ತಿಮಾಡುವ ಬಗ್ಗೆ ಒಂದು ದಿನದ ಕಾರ್ಯಗಾರವನ್ನು ಆಯಾ ಮೌಲ್ಯಮಾಪನ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದು, ಕಾರ್ಯಗಾರದ ವೇಳಾಪಟ್ಟಿಯು ಕೆಳಕಂಡಂತೆ ಇರುತ್ತದೆ.

| ಕ್ರ.ಸಂ | ಸ್ಥಳ/ವಲಯ | ದಿನಾಂಕ | ವೇಳೆ | ಭಾಗವಹಿಸಬೇಕಾದವರು |
|---|---|---|---|---|
| 1 | ಸರ್ಕಾರಿ ಡಿಆರ್‌ಆರ್ ಪಾಲಿಟೆಕ್ನಿಕ್, ದಾವಣಗೆರೆ – **ದಾವಣಗೆರೆ ವಲಯ** | 05.01.2016 | ಬೆಳಿಗ್ಗೆ 10.00 | ವಲಯದ ಮೌಲ್ಯಮಾಪನ ಕೇಂದ್ರದ ವ್ಯಾಪ್ತಿಗೆ ಬರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು/ಸಂಸ್ಥೆಯ ಸಂಯೋಜಕರು ಮತ್ತು ಪ್ರೋಗ್ರಾಂಗಳ ಸಂಯೋಜಕರು. |
| 2 | ಹುಬ್ಬಳ್ಳಿ (ಬಿವಿಬಿ ಇಂಜಿನಿಯರಿಂಗ್ ಕಾಲೇಜು ಸಭಾಂಗಣ), ಹುಬ್ಬಳ್ಳಿ ವಲಯ | 06.01.2016 | ಬೆಳಿಗ್ಗೆ 10.00 | |
| 3 | ಕಲಬುರ್ಗಿ (ಪಿಡಿಎ ಇಂಜಿನಿಯರಿಂಗ್ ಕಾಲೇಜು ಸಭಾಂಗಣ)– **ಕಲಬುರ್ಗಿ ವಲಯ** | 08.01.2016 | ಬೆಳಿಗ್ಗೆ 10.00 | |
| 4 | ಸರ್ಕಾರಿ ಸಿಪಿಸಿ ಪಾಲಿಟೆಕ್ನಿಕ್, ಮೈಸೂರು – **ಮೈಸೂರು ವಲಯ** | 11.01.2016 | ಬೆಳಿಗ್ಗೆ 10.00 | |
| 5 | ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು– **ಮಂಗಳೂರು ವಲಯ** | 12.01.2016 | ಬೆಳಿಗ್ಗೆ 10.00 | |
| 6 | ಸರ್ಕಾರಿ (ಎಸ್.ಜೆ) ಪಾಲಿಟೆಕ್ನಿಕ್, ಬೆಂಗಳೂರು–**ಬೆಂಗಳೂರು ವಲಯ** | 14.01.2016 | ಬೆಳಿಗ್ಗೆ 10:00 | |

ಮೇಲ್ಕಂಡ ದಿನಗಳಂದು ಆಯಾ ಮೌಲ್ಯಮಾಪನ ಕೇಂದ್ರದ ವ್ಯಾಪ್ತಿಗೆ ಬರುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರು/ಸಂಸ್ಥೆಯ ಸಂಯೋಜಕರು ಮತ್ತು ಪ್ರೋಗ್ರಾಂಗಳ ಸಂಯೋಜಕರು ತಪ್ಪದೇ ಕಾರ್ಯಗಾರದಲ್ಲಿ ಭಾಗವಹಿಸಿ ತಮ್ಮ ಸಂಸ್ಥೆಗಳಿಗೆ ಎನ್.ಬಿ.ಎ ವತಿಯಿಂದ ಮಾನ್ಯತೆ ಪಡೆಯುವ ಸಂಬಂಧ ಕಾರ್ಯಪ್ರವೃತ್ತರಾಗಬೇಕೆಂದು ಸೂಚಿಸಲಾಗಿದೆ. ಮುಂದುವರಿದು ರಾಷ್ಟ್ರೀಯ ಸೇವಾ ಯೋಜನೆಯಡಿಯಲ್ಲಿ ತಾಂತ್ರಿಕತೆಯ ಅಳವಡಿಕೆ ಕುರಿತು ಸಲಹೆಗಳನ್ನು ಇದೇ ಕಾರ್ಯಗಾರದಲ್ಲಿ ನೀಡಲಾಗುತ್ತದೆ

ನಿರ್ದೇಶಕರು

ಇವರಿಗೆ,

1. ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್, ಪ್ರಾಂಶುಪಾಲರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಮೌಲ್ಯಮಾಪನ ಶಿಬಿರದ ಶಿಭಿರಾಧಿಕಾರಿಗಳು ಮೇಲೆ ಸೂಚಿಸಿದ ದಿನಗಳಂದು ಸಂಬಂಧಿಸಿದ ಸಿಬ್ಬಂದಿಯವರನ್ನು ಕಾರ್ಯಗಾರಕ್ಕೆ ನಿಯೋಜಿಸತಕ್ಕದ್ದು ಮತ್ತು ಈ ಮಾಹಿತಿಯನ್ನು ಮೌಲ್ಯಮಾಪನ ಕೇಂದ್ರದ ಸೂಚನಾ ಫಲಕದಲ್ಲಿ ಪ್ರಕಟಿಸಲು ಸಹ ಸೂಚಿಸಲಾಗಿದೆ.
3. ರಾಷ್ಟ್ರೀಯ ಸೇವಾ ಯೋಜನೆ ಸಂಯೋಜಕರು, ತಾ.ಶಿ.ನಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಕ್ರಮಕ್ಕಾಗಿ
4. ಇ-ಆಡಳಿತ ವಿಭಾಗದ ಸಂಯೋಜಕರು ಇವರಿಗೆ ಸೂಕ್ತ ಕ್ರಮಕ್ಕಾಗಿ.
5. ನಿರ್ದೇಶಕರ ಆಪ್ತ ಸಹಾಯಕರ ಮಾಹಿತಿಗಾಗಿ.